ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

Thursday, 14th August 1974 Shravana 23,189 S.E.

The House met in the Assembly Chamber, Vidhana Soudha, at Thirty Minuts past Eight of the Clock.

MADAM. SPEAKER (Smt. K.S. NAGARATHNAMMA) in the Chair.

STARRED QUESTIONS

(to which oral answers were given)

* *Punishment to be Erring Appointment Authorities*

SRI K. SIDDAIAH (Santemarahalli).—62. Will the Chief Minister be pleased to state.—

(*a*) whether instances of illegality or irregulariuy committed by appointiing authorities of—

1. Government.
2. Statutory Corporation/Boards,
3. Government Companies, in the matter of recruitment, appointment and promotions have come to the notice of Government ;

(*b*) if so, whether there are any rules or regulations under which proceedings cold be institutdd against the erring officers ;

(*c*) if so, the details of such rules and regulations ;

(*d*) Whether any specific punishment is prescribed for specific offences ?

SRI D. DEVARAJ URS (Chief Minister).—(*a*) So far as Government Departments are concerned, some Instances have come to the notice of Government. Government have no information regarding irregularities, if any, committed by the statutory Corporations etc., as these are autonomousbodies.

(SRI D. DEVARAJ URS)

(*b*) Yes.

(*c*) The Karnataka State Civil Services (Classification control and Appeal) Rules, 1957, Karnataka State Civil Service (conduct) Rules, 1966 and Employment Exchanges (Compulsory Notification of Vacancies) Act, 1959.

(*d*) No, except in the case of violation of section 4 of the Employment Exchanges (Compulsory Notification of Vacancies) Act, 1959 Fot the failure of an employer to notify a vacancy which is required to be notified to the concerned Employment Exchange, the punishment prescribed under section 7 for first offence is fine to the extent of Rs. 500 and for subsequent offences a fine extending up to Rs. 1,000.

ಶ್ರೀ ಕೆ. ಸಿದ್ದಯ್ಯ.—ನನ್ನ ಮೊದಲನೆಯ ಪ್ರಶ್ನೆಗೆ ಉತ್ತರವಾಗಿ ಗವರ್ನಮೆಂಟ್ ಡಿಪಾರ್ಟ್‌ಮೆಂಟಿನಲ್ಲಿ ಇರ್ರೆಗ್ಯುಲ್ಯಾರಿಟೀಸ್ ಬಗ್ಗೆ ಕೆಲವು ಇನ್‌ಸ್ಟ್ರಕ್ಷನ್ಸ್ ಗವನಕ್ಕೆ ಬಂದಿದೆ. ಕಾರ್ಪೋರೇಷನ್ಸ್, ಸ್ಪಾಚ್ಯುಟರಿ ಬಾಡೀಸ್ ಇತ್ಯಾದಿಗಳಿಂದ ಸರ್ಕಾರಕ್ಕೆ ಇನ್‌ಫರ್‌ಮೇಷನ್ ಬಂದಿಲ್ಲ ಎಂದು ತಿಳಿಸಿದ್ದೀರಿ ಇವುಗಳಿಂದ ಒಂದಂ ವೇಳೆ ಇರ್ರೆಗ್ಯುಲಾರಿಟೀಸ್ ಇನ್‌ಸ್ಟ್ರಕ್ಷನ್ಸ್ ಸರ್ಕಾರದ ಗಮನಕ್ಕೆ ಬಾರದೆ ಇದ್ದರೆ, ಆ ಇನ್‌ಫರ್‌ಮೇಷನ್ ಅನ್ನು ಸರ್ಕಾರ ತರಿಸಿಕೊಂಡು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

† ಶ್ರೀ ಡಿ. ದೇವರಾಜ ಅರಸ್.—ತರಿಸಿಕೊಳ್ಳಬೇಕಾದದ್ದು ಇದೆ, ಕ್ರಮವನ್ನು ತೆಗೆದುಕೊಳ್ಳಬೇಕಾದದ್ದು ಇದೆ. ಇದುವರೆಗೂ ಇವೆಲ್ಲವನ್ನೂ ಒಂದು ರೀತಿಯಲ್ಲಿ ಡೀಲಾಗಿ ಬಿಟ್ಟುಕೊಂಡು ಬಂದಂ ಹೋಗಿದೆ. ಇದನ್ನು ತಪ್ಪಿಸಿ, ಸ್ಪ್ಯಾಚ್ಯುಟರಿ ಬಾಡೀಸ್ ಸಹ ಸರ್ಕಾರದ ಕಾನೂನು ಪ್ರಕಾರ ನಡೆಯಬೇಕಾದುದು ಇದೆ. ಇದನ್ನು ಎನ್‌ಫೋರ್ಸ್ ಮಾಡಬೇಕಾದದ್ದು ಅಗತ್ಯ ಇದೆ.

ಶ್ರೀ ಕೆ. ಸಿದ್ದಯ್ಯ.—ಪ್ರಮೋಷನ್ಸ್‌ನಲ್ಲಾಗಲೀ, ಅಪಾಯಿಂಟ್‌ಮೆಂಟ್‌ನಲ್ಲಾಗಲೀ ಇರ್ರೆಗ್ಯುಲಾರಿಟೀಸ್ ಇಲ್ಲಿ ಗ್ಯಾಲಿಟೀಸ್ ಇದ್ದರೆ, ಅಂಥಾದ್ದಕ್ಕೆ ಸ್ಪೆಸಿಫಿಕ್ ಪನಿಸ್‌ಮೆಂಟ್ಸ್ ಯಾವುದಾದರೂ ಪ್ರಿಸ್‌ಕ್ರೈಬ್ ಮಾಡಿದ್ದೀರಾ ? ಮಾಡದೆ ಇದ್ದರೆ ಏಕೆ ಮಾಡಬಾರದು ? ಅದನ್ನು ಮಾಡುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಇದುವರೆಗೂ ಇರ್ರೆಗ್ಯುಲ್ಯಾರಿಟೀಸ್ ಮಾಡಿದವರಿಗೆ ಎಕ್ಸ್‌ಪ್ಲನೇಷನ್ ಕೇಳಿ ಸುಮ್ಮನೆ ಬಿಟ್ಟುಕೊಂಡು ಬಂದಿದ್ದಾರೆ. ನಿಜವಾದ ಶಿಕ್ಷೆಯನ್ನು ಮಾಡಿಲ್ಲ. ಇನ್ನು ಮೇಲೆ ಮಾಡಬೇಕಾದದ್ದು ಇದೆ.

ಶ್ರೀ ಎಂ.ಬಿ. ರಾಮಸ್ವಾಮಿ.—ಪ್ರಮೋಷನ್ಸ್ ಕೊಡುವಾಗ ಮತ್ತು ರೆಕ್ರೂಟ್‌ಮೆಂಟ್ ಮಾಡುವಾಗ ಉದ್ದೇಶಪೂರಕವಾಗಿ ಕೆಲವು ಸೆಕ್ರೆಟರಿಗಳು ಕಾನೂನನ್ನು ಉಲ್ಲಂಘನೆ ಮಾಡಿದ್ದಾರೆ. ಅವರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ನಾನು ಆಗಲೇ ಒಂದೇ ಮಾತಿನಲ್ಲಿ ಹೇಳಿದ್ದೇನೆ. ಅಂಥ ಸಂದರ್ಭಗಳಲ್ಲಿ ಏನು ಕ್ರಮ ತೆಗೆದುಕೊಳ್ಳಬೇಕು ಎಂದು ವಿಚಾರ ಮಾಡಬೇಕಾಗಿದೆ. ಅದರ ಬಗ್ಗೆ ಹೆಚ್ಚು ಗಮನ ಕೊಡಬೇಕಾದ್ದು ಇದೆ. ಈಗ ಸುಮ್ಮನೆ ಎಕ್ಸ್‌ಪ್ಲನೇಷನ್ ಕೇಳಿ ಅದನ್ನು ಮಾರೆತು ಬಿಟ್ಟುಕೊಂಡು ಬಂದಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ.—ಈಗಲಾದರೂ ಎಷ್ಟು ವರ್ಷಗಳಲ್ಲಿ ಇದನ್ನು ಮಾಡುತ್ತೀರಿ ?

ಶ್ರೀ ಡಿ. ದೇವರಾಜ ಅರಸ್.—ಈಗಲೇ ಮಾಡೋಣ.

Asterisks indicate that remarks or speeches have not been revised by the member concerned.

ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್.—ತಪ್ಪಿತಸ್ಥ ಅಧಿಕಾರಿಗಳನ್ನು ಶಿಕ್ಷೆ ಮಾಡುವುದಕ್ಕೆ ನಿಯಮ ನಿಬಂದನೆಗಳು ಇವೆಯೆಂದು ತಿಳಿಸಿದ್ದೀರಿ, ಇದುವರೆಗೂ ತಪ್ಪಿತಸ್ಥರ ಪಟ್ಟಿಯನ್ನು ಸರ್ಕಾರದವರು ಎಷ್ಟು ಮಾಡಿದ್ದಾರೆ; ಎಷ್ಟು ವಿಚಾರಣೆ ಮಾಡಿದ್ದಾರೆ; ಶಿಕ್ಷೆ ಮಾಡಿದ್ದಾರೆ ಮತ್ತು ಅವರ ಹೆಸರುಗಳನ್ನು ಹೇಳುತ್ತೀರಾ ಸ್ವಾಮಿ ?

ಶ್ರೀ ಡಿ. ದೇವರಾಜ ಅರಸ್.—ಅದರ ಪೂರ್ಣ ವಿವರವನ್ನು ಕೊಡುವುದಕ್ಕೆ ಅದರವಿಚಾರ ನನ್ನ ಹತ್ತಿರ ಇಲ್ಲ. ಒಂದೇ ಮಾತಿನಲ್ಲಿ ನಾನು ಆಗಲೇ ಹೇಳಿದ್ದೇನೆ, ಮಾನ್ಯ ಸದಸ್ಯರು ಅರ್ಥಮಾಡಿಕೊಂಡಿಲ್ಲವೆಂದು ಕಾಣುತ್ತದೆ. ಇದುವರೆಗೂ ಅದರ ಕಡೆಗೆ ಹೆಚ್ಚು ಲಕ್ಷ್ಯ ಕೊಟ್ಟಿಲ್ಲ.

ಶ್ರೀ ಜೆ. ಎಲ್. ಕಬಾಡಿ.—ರಾಜ್ಯದಕ್ಷಿಣತಕ್ಕ ಡೈರೆಕ್ಟರ್ ಆಫ್ ಸೋಷಿಯಲ್ ವೆಲ್‌ಫೇರ್ ಸೆಲ್ ನಿಂದ ಹಾಗೂ ಸೋಷಿಯಲ್ ವೆಲ್‌ಫೇರ್ ಕಮಿಟಿಯವರಿಂದಲೂ ಕೆಲವೊಂದು ಅಪಾದನೆಗಳನ್ನು ಮಾಡಿರತಕ್ಕ ಇಲಾಖೆಗಳ ಮೇಲೆ ಅವರು ಇಂಥ ತಪ್ಪು ಮಾಡಿದ್ದಾರೆ, ಪರ್ಸೆಂಟೇಜ್ ಕೇಪ್ ಆಫ್ ಮಾಡಿಲ್ಲ ಎಂದು ದೂರು ಬಂದರೂ, ಅವರ ಮೇಲೆ ತಾವು ಏನು ಕ್ರಮ ಕೈಗೊಳ್ಳಬೇಕೋ ಅದನ್ನು ಇಲ್ಲಿಯವರೆಗೆ ಏಕೆ ಕೈಗೊಂಡಿಲ್ಲ ?

ಶ್ರೀ ಡಿ. ದೇವರಾಜ ಅರಸ್.—ಅದು ನನಗೆ ಗೊತ್ತಿಲ್ಲ, ಸಂಬಂಧಪಟ್ಟ ಮಂತ್ರಿಗಳಿದ್ದಾರೆ, ಅವರಿಗೆ ಪುನಃ ರಿಮೈಂಡ್ ಮಾಡಿ.

ಶ್ರೀ ಕೆ. ಸಿದ್ದಯ್ಯ.—ಸರ್ಕಾರದ ಗಮನಕ್ಕೆ ಕೆಲವು ಇಂಥ ಇರೆಗ್ಯುಲಾರಿಟೀಸ್ ಬಂದಿವೆ ಎಂದು ತಿಳಿಸಿದ್ದೀರಿ. ಅವುಗಳ ಬಗ್ಗೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಡಿ. ದೇವರಾಜ ಅರಸ್.—ಇದೇ ಉತ್ತರವನ್ನು ಮಾನ್ಯ ಸದಸ್ಯರಿಗೆ ಎಷ್ಟು ಸಾರಿ ಹೇಳಬೇಕು. ಅಂಥವರಿಗೆ ಎಕ್ಸ್‌ಪ್ಲನೇಷನ್ ಕೇಳಿ ಬಿಟ್ಟಿದ್ದೇವೆ ಎಂದು ಹೇಳುತ್ತಿದೆನೆ. ಇದು ಹೀಗೆಯೇ ನಡೆದುಕೊಂಡು ಬಂದಿದೆ.

* *Reconstruction of Chikkahole Dam*

65. SRI K. SIDDAIAH (Santhemarahalli).—Will the Chief Minister be pleased to state.—

(*a*) whether the investigation and enquiry regarding the breach of Chikkahole Dam has been completed ; if so, when ;

(*b*) whether any steps have been taken to take up the work : if so, when it is expected to be completed ?

SRI D. DEVARAJ URS (Chief Minister).—(*a*) Yes, enquiry report was received in September 1973.

(*b*) The estimate for the reconstruction of the Dam has been received and the same is being examined. The Dam is likely to be completed by 1975-76.

ಶ್ರೀ ಕೆ. ಸಿದ್ದಯ್ಯ.—ಚಿಕ್ಕಹೊಳೆ ಡ್ಯಾಂನ ಬಗ್ಗೆ ವಿಚಾರಣೆ ಯಾವಾಗ ಮುಗಿಯಿತು ಸ್ವಾಮಿ ?

† ಶ್ರೀ ಡಿ. ದೇವರಾಜ ಅರಸ್.—ವಿಚಾರಣೆ ಮುಗಿದು ಒಂದು ವರ್ಷವಾಗಿದೆ, ಮತ್ತೆ ಎಕ್ಸ್‌ಪರ್ಟ್ಸ್‌ನ್ನು ಕರೆಯಿಸಿ, ಡ್ಯಾಂನ್ನು ಯಾವರೀತಿ ಕಟ್ಟಬೇಕು ಎನ್ನುವುದನ್ನು ನೋಡಿಸಿ, ಈಗಾಗಲೇ ೭೨ ಲಕ್ಷ ರೂಪಾಯಿಗಳ ಎಸ್ಟಿಮೇಟ್ ಸ್ಯಾಂಕ್ಷನ್ ಆಗಿ ಕೆಲಸವನ್ನು ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು ಈಗಾಗಲೇ ಚಿಕ್ಕಹೊಳೆ ಡ್ಯಾಂನ ಬಗ್ಗೆ ವಿಚಾರಣೆ ವರದಿ ಬಂದಿದೆ ಎಂದು ಹೇಳಿದ್ದಿರಿ. ಇದಕ್ಕೆ ಯಾರು ಜವಾಬ್ದಾರರು, ಎಂದು ವರದಿ ಬಂದಿದೆ, ಹಾಗಿದ್ದರೆ ಅವರ ಮೇಲೆ ತಾವು ಏನು ಕ್ರಮ ತೆಗೆದುಕೊಂಡಿದ್ದೀರಿ ?